ಮಾತ್ರ ಫೈನಲ್ ಪ್ರವೇಶಿಸಿದ್ದಾರೆ. ಆಸ್ಟ್ರೇಲಿಯಾ ಓಪನ್ ಕ್ವಾರ್ಟರ್ ಫೈನಲ್‌ನಲ್ಲಿ ಅಲ್ಕರಾಜ್ ವಿರುದ್ಧ ಗೆಲುವು ಸಾಧಿಸಿದ್ದು ಬಿಟ್ಟರೆ ಸಿನ್ನರ್ ಮತ್ತು ಅಲ್ಕರಾಜ್ ಅವರನ್ನು ಎದುರಿಸಿದ ಉಳಿದ ಎಲ್ಲ ಪಂದ್ಯಗಳಲ್ಲಿ ಜೊಕೊವಿಚ್ ಸೋತಿದ್ದಾರೆ. ಆದರೂ ಎಲ್ಲ ಗ್ರ್ಯಾನ್‌ಸ್ಲಾಂ ಟೂರ್ನಿಗಳ ಸೆಮಿಫೈನಲ್ ಪ್ರವೇಶಿಸಿ ಎಟಿಪಿ ಮಾಸ್ಟರ್ಸ್‌ನ ಒಂದು ಫೈನಲ್ ಹಾಗೂ ಒಂದು ಸೆಮಿಫೈನಲ್ ಪಂದ್ಯ ಆಡಿರುವ 38 ವರ್ಷದ ಸರ್ಬಿಯಾ ಆಟಗಾರ ರ್‍ಯಾಂಕಿಂಗ್‌ನಲ್ಲಿ 4ನೇ ಸ್ಥಾನ ಗಳಿಸಿದ್ದಾರೆ. 16ನೇ ಬಾರಿ ರ್‍ಯಾಂಕಿಂಗ್‌ನಲ್ಲಿ ಅಗ್ರ ನಾಲ್ಕರಲ್ಲಿ ಕಾಣಿಸಿಕೊಂಡಿರುವ ಅವರು ರೋಜರ್ ಫೆಡರರ್ ಮತ್ತು ರಫೆಲ್ ನಡಾಲ್ ದಾಖಲೆಯನ್ನು ಹಿಂದಿಕ್ಕಿದ್ದಾರೆ. ಟೆನಿಸ್ ಡಾಟ್ ಕಾಂ ಪ್ರಕಾರ, 1973ರಲ್ಲಿ ರ್‍ಯಾಂಕಿಂಗ್ ವ್ಯವಸ್ಥೆ ಜಾರಿಯಾದ ನಂತರ ಫೆಡರರ್ ಮತ್ತು ನಡಾಲ್ ತಲಾ 15 ಬಾರಿ ಅಗ್ರ ನಾಲ್ಕರಲ್ಲಿ ಸ್ಥಾನ ಗಿಟ್ಟಿಸಿಕೊಂಡಿದ್ದಾರೆ.

## ಬಿಸಿರಕ್ತದ ಅಲ್ಕರಾಜ್- ಸಂಯಮಿ ಸಿನ್ನರ್

22 ವರ್ಷದ ಸ್ಪೇನ್ ಆಟಗಾರ ಅಲ್ಕರಾಜ್ ಅಂಗಣದಲ್ಲಿ ಹಾವ–ಭಾವಗಳ ಮೂಲಕವೇ ಗಮನಸೆಳೆಯುತ್ತಾರೆ. ಇಟಲಿಯ 24 ವರ್ಷ ವಯಸ್ಸಿನ ಸಿನ್ನರ್ ಶಾಂತ ಸ್ವಭಾವದ, ಸಂಯಮದ ಆಟಗಾರ. ಟ್ಯೂರಿನ್‌ನಲ್ಲಿ ನವೆಂಬರ್ 16ರಂದು ನಡೆದ ಎಟಿಪಿ ಟೂರ್ ಫೈನಲ್‌ನಲ್ಲಿ ಸಿನ್ನರ್ ಎದುರು ಹೋರಾಡಿ (67 (47), 57) ಸೋತ ಅಲ್ಕರಾಜ್ ಈ ವರ್ಷ ಗೆದ್ದಿರುವುದು 8 ಪ್ರಶಸ್ತಿ. ಇದು ಅವರ ಜೀವನಶ್ರೇಷ್ಠ ಸಾಧನೆ. 2023ರಲ್ಲಿ 6 ಪ್ರಶಸ್ತಿಗಳನ್ನು ಗೆದ್ದಿದ್ದರು. ಎಟಿಪಿ ಟೂರ್‌ನ ನಿರಾಸೆಯ ಜೊತೆಯಲ್ಲಿ ಗಾಯದ ಸಮಸ್ಯೆಯೂ ಕಾಡಿ ಡೇವಿಸ್ ಕಪ್ ಫೈನಲ್‌ನಲ್ಲಿ ದೇಶದ ಪರವಾಗಿ ಆಡಲು ಸಾಧ್ಯವಾಗದ ಬೇಸರದ ನಡುವೆಯೂ ರ್‍ಯಾಂಕಿಂಗ್ ಪಟ್ಟಿಯಲ್ಲಿ ಒಂದನೇ ಸ್ಥಾನ ಉಳಿಸಿಕೊಂಡು ಅವರು ಸಂಭ್ರಮಿಸಿದ್ದಾರೆ.

ಕಳೆದ ಬಾರಿಗೆ ಹೋಲಿಸಿದರೆ ಸಿನ್ನರ್ ಈ ವರ್ಷ ಗೆದ್ದಿರುವ ಪ್ರಶಸ್ತಿಗಳ ಸಂಖ್ಯೆ ಸ್ವಲ್ಪ ಕಡಿಮೆ. 2024ರಲ್ಲಿ 8 ಪ್ರಶಸ್ತಿ ಎತ್ತಿಹಿಡಿದಿದ್ದ ಅವರಿಗೆ ಈ ಸಲ 6 ಪ್ರಶಸ್ತಿಗಳು ಒಲಿದಿವೆ. ಆದರೆ ಇಬ್ಬರೂ ಈವರೆಗೆ ಗೆದ್ದಿರುವ ಒಟ್ಟು ಪ್ರಶಸ್ತಿಗಳು ತಲಾ 24. ರ್‍ಯಾಂಕಿಂಗ್ ಪಾಯಿಂಟ್‌ನಲ್ಲಿ ಇಬ್ಬರೂ 10 ಸಾವಿರದ ಗಡಿ ದಾಟಿದ್ದಾರೆ. ಅಲ್ಕರಾಜ್ 12,050 ಪಾಯಿಂಟ್ ಗಳಿಸಿದ್ದರೆ ಸಿನ್ನರ್ 11,500 ಪಾಯಿಂಟ್‌ಗಳನ್ನು ತಮ್ಮ ಖಾತೆಯಲ್ಲಿ ಇರಿಸಿಕೊಂಡಿದ್ದಾರೆ. ಗ್ರ್ಯಾನ್‌ಸ್ಲಾಂಗಳ ಪೈಕಿ ಫ್ರೆಂಚ್ ಓಪನ್ ಮತ್ತು ಅಮೆರಿಕ ಓಪನ್ ಪ್ರಶಸ್ತಿಗಳು ಅಲ್ಕರಾಜ್ ಪಾಲಾದರೆ ಆಸ್ಟ್ರೇಲಿಯಾ ಓಪನ್ ಮತ್ತು ವಿಂಬಲ್ಡನ್ ಕಿರೀಟಕ್ಕೆ ಸಿನ್ನರ್ ಒಡೆಯ. ಅಲ್ಕರಾಜ್ ವರ್ಷಾಂತ್ಯದಲ್ಲಿ ಒಂದನೇ ನಂಬರ್ ಆಟಗಾರ ಎನಿಸಿಕೊಂಡರೆ ಅವರನ್ನೇ ಮಣಿಸಿ ವರ್ಷದ ಕೊನೆಯ 'ಫೈನಲ್ಸ್' ಪ್ರಶಸ್ತಿ ಸಿನ್ನರ್ ತಮ್ಮದಾಗಿಸಿಕೊಂಡರು.

### ಈ ವರ್ಷದ ಎಟಿಪಿ ಪ್ರಶಸ್ತಿಗಳು

| | |
|---|---|
| **ಕಾರ್ಲೋಸ್ ಅಲ್ಕರಾಜ್** | |
| ಫೆಬ್ರುವರಿ | ರೋಟರ್‌ಡ್ಯಾಂ ಓಪನ್ |
| ಏಪ್ರಿಲ್ | ಮೋಂಟೆ ಕಾರ್ಲೊ ಮಾಸ್ಟರ್ಸ್ |
| ಮೇ | ಇಟಾಲಿಯನ್ ಓಪನ್; ಫ್ರೆಂಚ್ ಓಪನ್ |
| ಜೂನ್ | ಕ್ವೀನ್ಸ್ ಕ್ಲಬ್ ಚಾಂಪಿಯನ್‌ಷಿಪ್ |
| ಆಗಸ್ಟ್ | ಸಿನ್ಸಿನಾಟಿ ಮಾಸ್ಟರ್ಸ್; ಅಮೆರಿಕ ಓಪನ್ |
| ಸೆಪ್ಟೆಂಬರ್ | ಜಪಾನ್ ಓಪನ್ |
| **ಜಾನಿಕ್ ಸಿನ್ನರ್** | |
| ಜನವರಿ | ಆಸ್ಟ್ರೇಲಿಯಾ ಓಪನ್ |
| ಜೂನ್ | ವಿಂಬಲ್ಡನ್ |
| ಸೆಪ್ಟೆಂಬರ್ | ಚೀನಾ ಓಪನ್ |
| ಅಕ್ಟೋಬರ್ | ಸಿಕ್ಸ್ ಕಿಂಗ್ಸ್ ಸ್ಲಾಮ್, ವಿಯೆನಾ ಓಪನ್, ಪ್ಯಾರಿಸ್ ಮಾಸ್ಟರ್ಸ್ |

ರ್‍ಯಾಂಕಿಂಗ್‌ನಲ್ಲಿ ಮೂರನೇ ಸ್ಥಾನದಲ್ಲಿರುವ ಜರ್ಮನಿಯ ಅಲೆಕ್ಸಾಂಡರ್ ಜ್ವೆರೆವ್‌ಗೆ (5160) ಮೊದಲ ಇಬ್ಬರು ಗಳಿಸಿರುವ ಪಾಯಿಂಟ್‌ಗಳ ಅರ್ಧದಷ್ಟನ್ನೂ ಸಂಪಾದಿಸಲು ಸಾಧ್ಯವಾಗಲಿಲ್ಲ. ಜೊಕೊವಿಚ್ ಬಗಲಿಗೆ ಬಿದ್ದಿರುವುದು 4,830 ಪಾಯಿಂಟ್ಸ್. ಕೆನಡಾದ ಫೆಲಿಕ್ಸ್ ಆಗರ್, ಅಮೆರಿಕದ ಟೇಲರ್ ಫ್ರಿಟ್ಜ್, ಆಸ್ಟ್ರೇಲಿಯಾದ ಅಲೆಕ್ಸ್ ಮಿನೌರ್, ಇಟಲಿಯ ಲೊರೆನ್ಸೊ ಮುಸೆಟಿ ಮುಂತಾದವರು ಅಲ್ಕರಾಜ್–ಸಿನ್ನರ್ ಪ್ರಭೆಯಿಂದಾಗಿ ದೂರವೇ ಉಳಿದು ವರ್ಷದಲ್ಲಿ ಈಗೊಮ್ಮೆ ಮಿಂಚಿದ್ದಾರಷ್ಟೆ.

## ಬಲಿಷ್ಠ ಎದುರಾಳಿಗಳು

ನಡಾಲ್–ಫೆಡರರ್–ಜೊಕೊವಿಚ್ ನಡುವೆ ಯಾರೇ ಮುಖಾಮುಖಿಯಾದರೂ ಆ ಪಂದ್ಯದ ದಿನವನ್ನು 'ಬಿಗ್ ಡೇ' ಎಂದೇ ಟೆನಿಸ್ ಜಗತ್ತು ಪರಿಗಣಿಸುತ್ತಿತ್ತು, ವರ್ಷಗಳ ಹಿಂದೆ. ಈಗ ಆ ಸ್ಥಾನದಲ್ಲಿ ಅಲ್ಕರಾಜ್ ಮತ್ತು ಸಿನ್ನರ್ ಇದ್ದಾರೆ. ಇವರಿಬ್ಬರು ಪರಸ್ಪರ ಸೆಣಸಿದರೂ ಇತರ ಆಟಗಾರರನ್ನು ಎದುರಿಸಿದರೂ ಪಂದ್ಯಕ್ಕೆ 'ಸೆನ್ಸೇಷನಲ್' ಸ್ಥಾನವಿದೆ. ಆಸ್ಟ್ರೇಲಿಯಾ ಓಪನ್ ಬಿಟ್ಟು ಉಳಿದ ಮೂರು 'ಮೇಜರ್'ಗಳನ್ನು ಗೆದ್ದಿರುವ ಅಲ್ಕರಾಜ್ ಈವರೆಗೆ 16 ಬಾರಿ ಎಟಿಪಿ ಟೂರ್ನಿಯ ಪಂದ್ಯಗಳಲ್ಲಿ ಸಿನ್ನರ್‌ಗೆ ಮುಖಾಮುಖಿಯಾಗಿದ್ದು 10ರಲ್ಲಿ ಜಯ ಸಾಧಿಸಿದ್ದಾರೆ. ಫ್ರೆಂಚ್ ಓಪನ್ ಹೊರತುಪಡಿಸಿ ಮೂರು ಗ್ರ್ಯಾನ್‌ಸ್ಲಾಂ ಗೆದ್ದಿರುವ ಸಿನ್ನರ್ ಆಸ್ಟ್ರೇಲಿಯಾ ಓಪನ್‌ನಲ್ಲಿ ಹಾಲಿ ಹಾಗೂ ಸತತ ಎರಡು ಬಾರಿಯ ಚಾಂಪಿಯನ್. ಎಟಿಪಿ ಟೂರ್ ಫೈನಲ್ ಗೆಲ್ಲುವುದರೊಂದಿಗೆ ಅವರು ಟೆನಿಸ್‌ನಲ್ಲಿ ಗಳಿಸಿದ ವಾರ್ಷಿಕ ಮೊತ್ತ 19.1 ಮಿಲಿಯನ್ ಡಾಲರ್. ಕಳೆದ ಬಾರಿ 16.9 ಮಿಲಿಯನ್ ಡಾಲರ್ ಇತ್ತು.

ಡೋಪಿಂಗ್ ಪ್ರಕರಣದಲ್ಲಿ ಸಿಲುಕಿ ಮೂರು ತಿಂಗಳು ನಿಷೇಧಕ್ಕೆ ಒಳಗಾಗಿದ್ದ ಕಾರಣ ಈ ವರ್ಷ ಸಿನ್ನರ್ ಆಡಿದ್ದು 12 ಟೂರ್ನಿಗಳಲ್ಲಿ ಮಾತ್ರ. ಬೇಸ್‌ಲೈನ್‌ನಲ್ಲಿ ತಳವೂರಿ ಫೋರ್‌ಹ್ಯಾಂಡ್ ಮೂಲಕ ಆಕ್ರಮಣಕಾರಿ ಆಟವಾಡಬಲ್ಲ ಸಿನ್ನರ್, 'ವಿನ್ನರ್'ಗಳಿಗೆ ಹೆಸರುವಾಸಿ. ಅತ್ಯಂತ ಚುರುಕಿನ ಆಟಗಾರ ಅಲ್ಕರಾಜ್ ಕೂಡ ಬೇಸ್‌ಲೈನ್‌ನಲ್ಲಿ ನೆಲೆಯೂರುವವರೇ. ಆದರೆ ಪರಿಣಾಮಕಾರಿ ಗ್ರೌಂಡ್ ಸ್ಟ್ರೋಕ್‌ಗಳ ಮೂಲಕ ಅವರು ಎದುರಾಳಿಯನ್ನು ಕಂಗೆಡಿಸಬಲ್ಲರು.

ಶಕ್ತಿ, ಸ್ಥೈರ್ಯ ಮತ್ತು ತಂತ್ರಗಳಲ್ಲಿ ಸಾಟಿ ಇಲ್ಲದವರಂತೆ ಮುನ್ನುಗ್ಗುತ್ತಿರುವ ಅಲ್ಕರಾಜ್ ಮತ್ತು ಸಿನ್ನರ್ ವಿರುದ್ಧ ಜೊಕೊವಿಚ್ ಈ ಬಾರಿ ಮೂರು ಗ್ರ್ಯಾನ್‌ಸ್ಲಾಂಗಳ ಸೆಮಿಫೈನಲ್‌ಗಳಲ್ಲಿ ಆಡಿದ್ದಾರೆ. ಗಾಯದ ಸಮಸ್ಯೆ ಮತ್ತು ದಣಿವು ಅವರನ್ನು ಮುಂದೆ ಸಾಗಲು ಬಿಡಲಿಲ್ಲ.

2023ರಲ್ಲಿ ನಾಲ್ಕೂ ಗ್ರ್ಯಾನ್‌ಸ್ಲಾಂಗಳ ಫೈನಲ್ ತಲುಪಿ ಆಸ್ಟ್ರೇಲಿಯಾ, ಫ್ರೆಂಚ್ ಮತ್ತು ಅಮೆರಿಕ ಓಪನ್ ಪ್ರಶಸ್ತಿ ಗಳಿಸಿದ ನಂತರ ದಾಖಲೆಯ 24ನೇ ಪ್ರಶಸ್ತಿಗಾಗಿ ಕಾಯುತ್ತಿರುವ ಜೊಕೊವಿಚ್ ಕನಸಿಗೆ ಅಲ್ಕರಾಜ್ ಮತ್ತು ಸಿನ್ನರ್ ತಡೆಗೋಡೆಯಾಗಿ ನಿಂತಿದ್ದಾರೆ. 'ಒಂದೆರಡು ವರ್ಷಗಳಿಂದ ಕನಸು ಕೈಗೂಡಲು ಅಡ್ಡಿಯಾಗಿದೆ. ಆದರೆ ಎಂದಾದರೊಮ್ಮೆ ದಾಖಲೆಯನ್ನು ಮುರಿಯುವೆ' ಎಂದು ಜೊಕೊವಿಚ್ ಭರವಸೆಯಿಂದ ನುಡಿದಿದ್ದಾರೆ. 'ಪರಿಸ್ಥಿತಿ ನನ್ನನ್ನು ನಿಗದಿಗಿಂತ ಮೊದಲೇ ನಿವೃತ್ತಿ ನಿರ್ಧಾರ ಕೈಗೊಳ್ಳಲು ಪ್ರೇರೇಪಿಸುವ ಸಾಧ್ಯತೆ ಇದೆ' ಎಂದು ಹೇಳಿರುವುದೂ ಅವರೇ. ಯುವ ಆಟಗಾರರ ನಡುವೆ ಮನೋಬಲ ಮತ್ತು ಮೈಯ ಕಸುವು ಉಳಿಸಿಕೊಂಡು ನೆಲೆ ನಿಲ್ಲುವ ಸವಾಲು ಅವರ ಮುಂದಿದೆ. ಇದರಲ್ಲಿ ವಿಫಲರಾದರೆ ಟೆನಿಸ್ ಜಗತ್ತು ಆಸ್ಟ್ರೇಲಿಯಾದ ಮಾರ್ಗರೆಟ್ ಕೋರ್ಟ್ ಅವರನ್ನೇ ಅಧಿಪತಿಯಾಗಿ ಉಳಿಸುವುದೇ? ■



ನೊವಾಕ್ ಜೊಕೊವಿಚ್